**<u>ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.</u>**

**ಸಿ ಸಿ ಸಂಃ 742-2019**

| | | |
|---|---|---|
| ಸಾಕ್ಷಿಯ ಹೆಸರುಃ | ಅಪ್ಪಣ್ಣನಾಯಕ | ಪ್ರಾಸಾಃ: 01 |
| ತಂದೆ/ಗಂಡನ ಹೆಸರುಃ | ಲೇಟ್ ಹನುಮಯ್ಯ | ಚಾಸಾಃ: 01 |
| ವಯಸ್ಸುಃ | ವರ್ಷ 65 | ಪ್ರಮಾಣೀಕರಿಸಿದ ದಿಃ 03.02.2020 |
| ಉದ್ಯೋಗಃ | ಕೂಲಿ | |
| ವಾಸ ಸ್ಥಳಃ | ಮುತ್ತಿನಮುಳಸೋಗೆ | ಪಿರಿಯಾಪಟ್ಟಣ ತಾಲ್ಲೂಕು |

**<u>ಮುಖ್ಯ ವಿಚಾರಣೆಃ ಹಿಸಸಅ ರಿಂದಃ</u>**

ಆರೋಪಿತರ ಪರಿಚಯವಿದೆ. ಆರೋಪಿತರು ನಮ್ಮ ಊರಿನವರೇ. ಚಾಸಾ-02 ಮತ್ತು 03 ನನ್ನ ಸಂಬಂಧಿಕರು. ಸುಮಾರು 2 ವರ್ಷದ ಹಿಂದೆ ಸಂಜೆ 6 ಗಂಟೆ ಸಮಯದಲ್ಲಿ ನಮ್ಮ ಊರಿನ ನಮ್ಮ ಜಮೀನಿನ ಬಳಿ ದನ ಮೇಯಿಸಿಕೊಂಡು ಬರುತ್ತಿರುವಾಗ ನನ್ನ ಜಮೀನಿನ ತಂತಿ ಕಂಬ ಮುರಿದು ಹೋಗಿದ್ದು 1 ರಿಂದ 02 ನೇ ಆರೋಪಿತರು ಟ್ರ್ಯಾಕ್ಟರ್ ಓಡಿಸುತ್ತಿದ್ದು ಅವರನ್ನು ಕಂಬ ಮುರಿದಿರುವವರು ಯಾರು ಎಂದು ಕೇಳಿದಾಗ, 1 ರಿಂದ 04 ನೇ ಆರೋಪಿತರು ಬೋಳಿ ಮಗನೆ, ಸೂಳೆ ಮಗನೆ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ, 1 ನೇ ಆರೋಪಿ ಕಲ್ಲಿನಿಂದ ನನ್ನ ಎಡಗಾಲಿಗೆ ಹೊಡೆದು ಹಲ್ಲೆ ಮಾಡಿ ರಕ್ತಗಾಯಪಡಿಸಿರುತ್ತಾರೆ. ನಂತರ ಗ್ರಾಮಸ್ಥರು ಬಂದು ಜಗಳ ಬಿಡಿಸಿ, ಚಾಸಾ-03 ರವರು ನನ್ನನ್ನು ಕರೆದುಕೊಂಡು ಕುಶಾಲನಗರ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ. ನಂತರ ನಾನು ಮರುದಿನ ಬೆಟ್ಟದಪುರ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ದೂರು ಕೊಟ್ಟ ಮರುದಿನ ಪೊಲೀಸ್ ರು ಸ್ಥಳ ಪರಿಶೀಲನೆ ಮಾಡಿ ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ. ನಂತರ ನಾನು ಪೊಲೀಸ್ ರ ಮುಂದೆ ಯಾವುದೇ ಮರು ಹೇಳಿಕೆ ನೀಡಿರುವುದಿಲ್ಲ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.01 ಎಂದು ಗುರುತಿಸಲಾಯಿತು. ಅದರಲ್ಲಿರುವ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುತ್ತೇನೆ. ಸ್ಥಳ ಮಹಜರ್ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.02 ಎಂದು ಗುರುತಿಸಲಾಯಿತು. ಅದರಲ್ಲಿರುವ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುತ್ತೇನೆ. ಆರೋಪಿಗಳನ್ನು ಈ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತೇನೆ.

**(ಈ ಸಮಯದಲ್ಲಿ ಸಹಾಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲು ಹಿಸಸಅ ರಿಂದಃ</u>**

ದಿನಾಂಕಃ 11.01.2018 ರಂದು ಸಂಜೆಃ 6 ಗಂಟೆ ಸಮಯದಲ್ಲಿ ಕೃತ್ಯ ನಡೆದಿರುತ್ತದೆ ಎಂದರೆ ಸರಿ. ನಾನು ನನ್ನ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ 01 ನೇ ಆರೋಪಿ ಹಾಗೂ 02 ನೇ ಆರೋಪಿ ಮಂಜ @ ಹೇಮಂತ, ಟ್ರ್ಯಾಕ್ಟರ್ ನು ಓಡಿಸಿ ಕಲ್ಲು ಕಂಬಕ್ಕೆ ಗುದ್ದಿಸಿ ಕಲ್ಲು ಕಂಬವನ್ನು ಬೀಳಿಸಿರುತ್ತಾರೆ ಹಾಗೂ 02 ನೇ

ಆರೋಪಿ ಕಾಲಿನಿಂದ ನನಗೆ ಒದ್ದಿರುತ್ತಾರೆ ಎಂದು ನಾನು ಗಾಬರಿಯಲ್ಲಿ ದೂರು ನೀಡಿರುತ್ತೇನೆ ಎಂದು ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಭಾಗವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿ.ಪಿ.03** ಎಂದು ಗುರುತಿಸಲಾಯಿತು.

ಅದೇ ದಿನ ಅದೇ ಸಮಯದಲ್ಲಿ ಆರೋಪತರೆಲ್ಲರೂ 01 ನೇ ಆರೋಪಿ ಯ ಟ್ರ್ಯಾಕ್ಟರ್ ಸಹಾಯದಿಂದ ಮಣ್ಣನ್ನು ಏರುತ್ತಿದ್ದು ಸದರಿ ಟ್ರ್ಯಾಕ್ಟರ್ ನಮ್ಮ ಜಮೀನಿನ ಕಲ್ಲು ಕಂಬಕ್ಕೆ ಡಿಕ್ಕಿ ಮಾಡಿ ಕಲ್ಲು ಕಂಬ ಬಿದ್ದಿರುತ್ತದೆ ಎಂದರೆ ಸರಿ. ಆಗ 02 ನೇ ಆರೋಪಿ ಇನ್ನೊಂದು ಟ್ರ್ಯಾಕ್ಟರ್ ನಿಂದ ನಮ್ಮ ಬೇಲಿ ಕಂಬಕ್ಕೆ ಡಿಕ್ಕಿ ಮಾಡಿ ಎರಡು ಕಲ್ಲು ಕಂಬ ಬಿದ್ದಿರುತ್ತದೆ ಎಂದರೆ ಸರಿ. ಆಗ ನಾನು ಅಲ್ಲಿಗೆ ಹೋಗಿ ಯಾಕೆ ಕಲ್ಕು ಕಂಬ ಬೀಳಿಸಿದ್ದಿರಾ ಎಂದು ಕೇಳಿದ್ದಕ್ಕೆ 03 ಮತ್ತು 04 ನೇ ಆರೋಪಿತರು ಅಲ್ಲಿಗೆ ಬಂದು ನನಗೆ ಸೂಳೆ ಮಗನೇ, ಬೋಳಿ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದು, ಕಲ್ಲು ಕಂಬ ಬೀಳಿಸಿದ ಹಾಗೆ ನಿನ್ನನ್ನು ಬೀಳಿಸುತ್ತೇವೆ ಎಂದು ಗಲಾಟೆ ಮಾಡಿ ನೂಕಾಡಿ ನನ್ನನ್ನು ಬೀಳಿಸಿರುತ್ತಾರೆ ಎಂದರೆ ಸರಿ. ಅದೇ ಸಮಯದಲ್ಲಿ 02 ನೇ ಆರೋಪಿ ನನ್ನನ್ನು ತಬ್ಬಿ ಹಿಡಿದು ಮುಂದೆ ಹೋಗಲು ಬಿಡದೇ ಕೈಗಳಿಂದ ನನ್ನ ಮೈಕೈಗೆ ಹೊಡೆದಿರುತ್ತಾರೆ ಎಂದರೆ ಸರಿ. ಚಾಸಾ-02 ಮತ್ತು 03 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ ಎಂದರೆ ಸರಿ. ಈ ಬಗ್ಗೆ ನಾನು ಬಟ್ಟದಪುರ ಪೊಲೀಸ್ ರಿಗೆ ದೂರು ನೀಡಿದ ನಂತರ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ನಾನು ದೂರು ನೀಡಿದ ಒಂದು ವಾರದಂತೆ ಅಂದರೆ ದಿನಾಂಕಃ 19.03.2018 ರಂದು ಪೊಲೀಸ್‌ರು ಕೃತ್ಯ ಸ್ಥಳಕ್ಕೆ ಬಂದು ನಾನು ಕೃತ್ಯ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ನನ್ನ ಮತ್ತು ಚಾಸಾ-4 ಮತ್ತು 05 ರವರ ಸಮಕ್ಷಮ ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ. ಎಸ್.ಎನ್.ಜಿ. ವಕೀಲರಿಂದಃ</u>**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಿ.ಪಿ.01 ರಲ್ಲಿ ದೂರನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅಂತೆಯೇ ದೂರಿನಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. 01 ಮತ್ತು 02 ನೇ ಆರೋಪಿತರು ಓಡಿಸುತ್ತಿದ್ದ ಟ್ರ್ಯಾಕ್ಟರ್ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ನನ್ನ ಜಮೀನಿಗೆ ತಂತಿಬೇಲಿ ಹಾಕಿರುವ ವಿಷಯವನ್ನು ತೋರಿಸಲು ನ್ಯಾಯಾಲಯಕ್ಕೆ ಫೋಟೋಗಳನ್ನು ಹಾಜರುಪಡಿಸಿರುವುದಿಲ್ಲ. ನಿ.ಪಿ.02 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ಆರೋಪಿತರು ಅವಾಚ್ಯ ಶಬ್ದಗಳಿಂದ ನಿಂದಿಸಿರುವುದನ್ನು ನನ್ನನ್ನು ಬಿಟ್ಟು ಬೇರೆ ಯಾರು ಕೇಳಿಸಿಕೊಂಡಿಲ್ಲ. ಸದರಿ ದಿನ ಯಾವುದೇ ಕೃತ್ಯ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಬೈದಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಕಾಂಗ್ರೆಸ್ ಪಕ್ಷದ ಕಾರ್ಯಕರ್ತ ಎಂದರೆ ಸರಿಯಲ್ಲ. ಆರೋಪಿತರು ಜೆ.ಡಿ.ಎಸ್. ಪಕ್ಷಗಾರರಾಗಿದ್ದರಿಂದ ಅವರ ಮೇಲೆದ ದ್ವೇಷಕ್ಕೊಸ್ಕರ ಸುಳ್ಳು ಪ್ರಕರಣವನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**<u>ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>**
**<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>**

**ಹೆಃಸಿ.ನ್ಯಾ. ಹಾಗೂ ಪ್ರ.ವ.ನ್ಯಾ.ದಂ.**
**ಪಿರಿಯಾಪಟ್ಟಣ.**

**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ ಸಿ ಸಂಃ 742-2019**

| | | |
|---|---|---|
| ಸಾಕ್ಷಿಯ ಹೆಸರುಃ | ನಾಗಪ್ಪ | ಫ್ರಾಸಾಃಃ 02 |
| ತಂದೆ/ಗಂಡನ ಹೆಸರುಃ | ತಮ್ಮಯ್ಯನಾಯಕ | ಚಾಸಾಃಃ 04 |
| ವಯಸ್ಸುಃ | ವರ್ಷ 42 | ಪ್ರಮಾಣೀಕರಿಸಿದ ದಿಃ 03.02.2020 |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ಮುತ್ತಿನಮುಳಸೋಗೆ ಗ್ರಾಮ | ಪಿರಿಯಾಪಟ್ಟಣ ತಾಲ್ಲೂಕು |

**ಮುಖ್ಯ ವಿಚಾರಣೆಃ ಹಿಸಸಅ ರಿಂದಃ**

ಆರೋಪಿಗಳ ಪರಿಚಯವಿದೆ ಅವರು ನಮ್ಮ ಊರಿನವರು. ಫ್ರಾಸಾ-01 ರವರ ಸಂಬಂಧಿಕರು. ದಿಃ 11.01.2018 ರಂದು ಆರೋಪಿತರು ಟ್ರ್ಯಾಕ್ಟರ್ ಕಲ್ಲು ಕಂಬವನ್ನು ಹೊಡೆದ ವಿಷಯವಾಗಿ ಹಲ್ಲೆ ಮಾಡಿರುತ್ತಾರೆ ಎಂದು ಫ್ರಾಸಾ-01 ರವರು ನನಗೆ ತಿಳಿಸಿರುತ್ತಾರೆ. ನಂತರ ಪ್ರ್ಯಾ-01 ರವರು ದೂರು ನೀಡಿದ ಮರುದಿನ ಪೊಲೀಸ್‌ರು ಕೃತ್ಯ ಸ್ಥಳವನ್ನು ಫ್ರಾಸಾ-01 ರವರ ಜಮೀನಿಗೆ ಪೊಲೀಸ್‌ರು ಮಹಜರ್ ಕ್ರಮವನ್ನು ಜರುಗಿಸಲು ಬಂದಿರುತ್ತಾರೆ. ಆಗ ಅವರು ನನ್ನನ್ನು ಕೃತ್ಯ ಸ್ದಳಕ್ಕೆ ಕರೆಸಿ ಈ ಸ್ಥಳದಲ್ಲಿ ಈಗ ಮಹಜರ್ ಮಾಡಬೇಕಾಗಿದ್ದು ಅದಕ್ಕೆ ನೀವು ಸಹಕರಿಸಬೇಕೆಂದು ಕೋರಿ ನಾವು ಒಪ್ಪಿದ ಮೇರೆಗೆ ನನ್ನ ಹಾಗೂ ಚಾಸಾ-05 ರವರ ಸಮಕ್ಷಮ ಪೊಲೀಸ್‌ರು ಕೃತ್ಯ ಸ್ಥಳದ ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ. ಕೃತ್ಯ ಸ್ಥಳದಲ್ಲಿ ಕಲ್ಲು ಕಂಬ ಉರುಳಿ ಬಿದ್ದಿರುವುದು ಕಂಡು ಬಂದಿರುತ್ತದೆ.

ಸದರಿ ಮಹಜರ್ ಗೆ ಸ್ಥಳದಲ್ಲಿಯೇ ನಾನು ಹಾಗೂ ಚಾಸಾ-05 ರವರು ಸಹಿ ಮಾಡಿರುತ್ತೇವೆ. ಸಾಕ್ಷಿಯು ನಿ.ಪಿ.02 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.02(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಎಸ್.ಎನ್.ಜಿ. ವಕೀಲರಿಂದಃ**

ನಿ.ಪಿ.02 ರಲ್ಲಿ ಬರೆದಿರುವ ಒಕ್ಕಣಿಕೆಗಳು ನನಗೆ ಗೊತ್ತಿಲ್ಲ. ಪೊಲೀಸ್ ರು ಕೃತ್ಯ ಸ್ಥಳದಲ್ಲಿ ಯಾವುದೇ ರೀತಿಯ ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಪೊಲೀಸ್ ಠಾಣೆಯಲ್ಲಿಯೇ ಮಹಜರ್ ಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಕೃತ್ಯ ಸ್ಥಳದ ಪೂಃ ಸಾರ್ವಜನಿಕ ರಸ್ತೆ, ಪಃ ರಸ್ತೆ, ದಃ ಅಜ್ಜಪ್ಪರವರ ಜಮೀನು, ಉಃ ರಸ್ತೆ ಇರುತ್ತದೆ.

**ಮರುವಿಚಾರಣೆ ಇಲ್ಲ.**

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ. ಹಾಗೂ ಪ್ರ.ವ.ನ್ಯಾ.ದಂ.**
**ಪಿರಿಯಾಪಟ್ಟಣ.**